## 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

ಓ.ಎಸ್. ನಂ. 6/2020 ಪಿಡಬ್ಲು -1

ದಿನಾಂಕ 04-12-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ವಾದಿ ಇದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಮಾಹಿತಿ ಸತ್ಯವಾಗಿದ್ದು ನಾನೇ ಮಾಹಿತಿ ನೀಡಿ ಸಹಿ ಹಾಕಿರುತ್ತೇನೆ.

ನಾನು ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ . ಈ ದಿನ ಸಹ ನಾನು ನ್ಯಾಯಾಲಯಕ್ಕೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸುತ್ತಾರೆ . ದಿನಾಂಕ 23-01-1990 ರ ನೊಂದಾಯಿತ ಕ್ರಯಪತ್ರದ ದೃಢಿಕೃತ ನಕಲನ್ನು ನಿಪಿ 1 ಎಂದು , ದಿನಾಂಕ 19-04-2002 ರ ನೊಂದಾಯಿತ ತಿದ್ದುಪಡಿ ಪತ್ರದ ದೃಢಿಕೃತ ನಕಲನ್ನು ನಿಪಿ 2 ಎಂದು , ಸರ್ವೆ ನಂಬರ್ 36/2 ಕ್ಕೆ ಸಂಬಂಧಿಸಿದ 2 ಪುಟಗಳುಳ್ಳ 2 ಪಾಣಿಗಳನ್ನು ನಿಪಿ 3 ಮತ್ತು 4 ಎಂದು, ಅ ದೇ ಸರ್ವೆ ನಂಬರ್ ಗೆ ಸಂಬಂಧಿಸಿ ಮತ್ತೊಂದು ಪಹಣಿಯನ್ನು ನಿಪಿ 5 ಎಂದು , 2 ಪುಟಗಳುಳ್ಳ ಮುಟೇಷನ ಪ್ರತಿಗಳನ್ನು ನಿಪಿ 6 ಮತ್ತು 7 ಎಂದು , ಸರ್ವೆ ನಂಬರ್ 36/2 ಕ್ಕೆ ಸಂಬಂಧಿಸಿದ 2 ಪುಟಗಳುಳ್ಳ ಮತ್ತೆರಡು ಪಹಣಿಗಳನ್ನು ನಿಪಿ 8 ಮತ್ತು 9 ಎಂದು , ಮತ್ತೊಂದು ಪಹಣಿಯನ್ನು ನಿಪಿ 10 ಎಂದು , ಸರ್ವೆ ನಂಬರ್ 36/2 ಕ್ಕೆ ಸಂಬಂಧಿಸಿದ 3 ಪುಟಗಳುಳ್ಳ 3 ಜೊತೆ ಪಹಣಿಗಳನ್ನು ನಿಪಿ 11 ರಿಂದ 13 ಎಂದು, ಎರಡು ಪುಟಳುಳ್ಳ ಅದೇ ಸರ್ವೆ ನಂಬರ್ ಗೆ ಸೇರಿದ ಮತ್ತೊಂದು ಪಹಣಿಯನ್ನು ನಿಪಿ 14 ಎಂದು ಗುರುತಿಸಲಾಯಿತು.

ಅಸಲು ದಾವೆ 21/1993 ರಲ್ಲಿನ ವಾದ ಪತ್ರ ಹಾಗೂ ವ್ಯಾಲುವೇಷನ ಸ್ಲಿಪ್ ನ ದೃಢಿಕೃತ ನಕಲನ್ನು ಒಟ್ಟಾಗಿ ನಿಪಿ 15 ಎಂದು , ಸದರಿ ದಾವೆಯಲ್ಲಿ ಸಲ್ಲಿಸಲಾದ 2 ಪ್ರತಿವಾದಿ ಪತ್ರದ ದೃಢಿಕೃತ ನಕಲುಗಳನ್ನು ನಿಪಿ 16 ಮತ್ತು 17 ಎಂದು , ಸದರಿ ದಾವೆಯಲ್ಲಿ ವಿವಾದಾಂಶಗಳ ದೃಢಿಕೃತ ನಕಲನ್ನು ನಿಪಿ 18 ಎಂದು , ಸದರಿ ದಾವೆಯಲ್ಲಿ ಆದಂತಹ ತೀರ್ಪಿನ ದೃಢಿಕೃತ ನಕಲನ್ನು ನಿಪಿ 19 ಎಂದು , ಡಿಕ್ರಿಯ ನಕಲನ್ನು ನಿಪಿ 20 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು ಮಂಜೂರು ಮಾಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ .

ಸಹಿ/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.